ಆ) ಗ್ರಾಮಾಂತರ ಪ್ರದೇಶಗಳ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಿಗೆ ಕಟ್ಟಡಗಳನ್ನು ನಬಾರ್ಡ್ ಅನುದಾನದಲ್ಲಿ ಒದಗಿಸಲಾಗುತ್ತಿದೆ. ಅದರೆ ನಗರ ಪ್ರದೇಶದ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಿಗೆ ಕಟ್ಟಡಗಳನ್ನು ರಾಜ್ಯ ಸರ್ಕಾರದ ಅನುದಾನದಲ್ಲಿ ಒದಗಿಸಬೇಕಾಗಿರುತ್ತದೆ. ಲಭ್ಯವಿರುವ ಅನುದಾನದಲ್ಲಿ ಹಂತ ಹಂತವಾಗಿ ನಗರ ಪ್ರದೇಶದ ಕಾಲೇಜುಗಳಿಗೆ ಕಟ್ಟಡಗಳನ್ನು ಒದಗಿಸಲು ಕ್ರಮವಹಿಸಲಾಗುತ್ತಿದೆ. ಮುಂಬರುವ ವರ್ಷಗಳಲ್ಲಿ ಸದರಿ ಕಾಲೇಜಿಗೂ ಕಟ್ಟಡ ಒದಗಿಸಲು ಕ್ರಮ ಕೈಗೊಳ್ಳಲಾಗುವುದು. ಬಂದಿದೆ. ವಿದ್ಯಾರ್ಥಿಗಳಿಗೆ ಪಾಠ ಪ್ರವಚನಗಳಿಗೆ ಹಾಗೂ ಪ್ರಯೋಗ ಶಾಲೆಗಳಿಗೆ ತೊಂದರೆಯಾಗದಂತೆ ಸಧ್ಯಕ್ಕೆ ಪ್ರೌಢಶಾಲಾ ವಿಭಾಗದ ಕಟ್ಟಡದಲ್ಲಿ ನಡೆಸಲಾಗುತ್ತಿದೆ.

ಇ) ಕ್ರಮ ಕೈಗೋಳ್ಳಲಾಗುವುದು.

ಈ) ಮುಂಬರುವ ವರ್ಷಗಳಲ್ಲಿ ಅನುದಾನದ ಲಭ್ಯತೆಯನ್ನು ಆಧರಿಸಿ ಹಂತ ಹಂತವಾಗಿ ಕಟ್ಟಡ ಒದಗಿಸಲು ಕ್ರಮ ವಹಿಸಲಾಗುವುದು.

ಟಾಸ್ಕ್‌ಫೋರ್ಸ್ ಸಮಿತಿಯ ನಿಯಮಾವಳಿ

36(243)ಶ್ರೀ ಖಾದರ್ ಯು ಟಿ:(ಮಂಗಳೂರು) ಮಾನ್ಯ ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಾಸಕರ ನೇತೃತ್ವದಲ್ಲಿ ಕುಡಿಯುವ ನೀರಿನ ಸೌಲಭ್ಯಕ್ಕಾಗಿ ರಚಿಸಿರುವ "ಟಾಸ್ಕ್‌ಫೋರ್ಸ್ ಸಮಿತಿಗೆ ಸರ್ಕಾರವು ರೂಪಿಸಿರುವ ನಿಯಮಾವಳಿಗಳಿಂದ ಶಾಶ್ವತ ಕುಡಿಯುವ ನೀರಿನ ಸೌಲಭ್ಯವನ್ನು ಒದಗಿಸಲು ಸಾಧ್ಯವಾಗದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಈ ನಿಯಮಾವಳಿಯನ್ನು ಸಡಿಲಿಸಿ ಶಾಶ್ವತ ಕುಡಿಯುವ ನೀರನ್ನು ಒದಗಿಸಲು ಸರ್ಕಾರ ಯಾವ ಕ್ರಮ ಕೈಗೊಳ್ಳುವುದು?

ಶ್ರೀ ಜಗದೀಶ್ ಶೆಟ್ಟರ್(ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಸಚಿವರು):

ಅ) & ಆ) ಶಾಸಕರ ನೇತೃತ್ವದ 'ಕಾರ್ಯಪಡೆ' ಯನ್ನು ತುರ್ತು ಕುಡಿಯುವ ನೀರಿನ (ಸಣ್ಣ ಪ್ರಮಾಣದ ಕಾಮಗಾರಿಗಳು) ಯೋಜನೆಗಳ ಅನುಷ್ಠಾನ ಮೂಲಕ ತಾತ್ಕಾಲಿಕ ಪರಿಹಾರ ಸಲುವಾಗಿ ರಚಿಸಲಾಗಿದೆ. ಸಾಕಷ್ಟು ಪ್ರಮಾಣದಲ್ಲಿ ಸುರಕ್ಷಿತ ಕುಡಿಯುವ ನೀರಿನ ಸಮರ್ಪಕ ವ್ಯವಸ್ಥೆ ಕಲ್ಪಿಸಲು ಆರ್ಥಿಕ ಹಾಗೂ ತಾಂತ್ರಿಕ ಕಾರ್ಯಸಿಂಧುತ್ವವಿರುವ ಶಾಶ್ವತ ಯೋಜನೆಗಳನ್ನು ರೂಪಿಸಲು ಇಲಾಖೆಯ ಇಂಜಿನಿಯರಿಂಗ್ ವಿಭಾಗಗಳು ಕ್ರಮಬಹಿಸುತ್ತವೆ ಇಂತಹ ಯೋಜನೆಗಳಿಗೆ ಅಗತ್ಯವಿರುವ ಆಡಳಿತಾತ್ಮಕ ಹಾಗೂ ತಾಂತ್ರಿಕ ಅನುಮೋದನೆ ನೀಡಲು ಅನುದಾನ ಲಭ್ಯತೆ ಆಧರಿಸಿ ಸರ್ಕಾರವು ಚಾಲ್ತಿ ಮಾರ್ಗದರ್ಶಿಗಳನ್ವಯ ಕ್ರಮವಹಿಸುತ್ತದೆ.

ಮಹಿಳಾ ಕಾಲೇಜಿಗೆ ಕಟ್ಟಡದ ಅಭಾವ

37(275) ಶ್ರೀ ಕುಲಕರ್ಣಿ ಶ್ರೀಕಾಂತ್ ಸುಬ್ಬಾರಾವ್:(ಜಮಖಂಡಿ)ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಜಮಖಂಡಿ ಮಹಿಳಾ ಕಾಲೇಜಿನಲ್ಲಿರುವ ವರ್ಗಗಳ ಎಷ್ಟು: ವಿದ್ಯಾರ್ಥಿನಿಯರ ಸಂಖ್ಯೆ ಎಷ್ಟು;?

ಆ) ಕಾಲೇಜಿನಲ್ಲಿ ಎಷ್ಟು ಸರ್ಕಾರ ಕೋಣೆಗಳ ಮತ್ತು ಶಿಕ್ಷಕರ ಅಭಾವವಿದೆ?

ಇ) ಈ ಸಮಸ್ಯೆಗಳಿಗೆ ಸರ್ಕಾರ ಪರಿಹಾರ ನೀಡಲು ಕೈ ಗೊಂಡ ಕ್ರಮಗಳೇನು?

ಈ) ಹಾಗಿದ್ದಲ್ಲಿ ಎಂದಿನಿಂದ ಕಟ್ಟಡ ಕಾಮಗಾರಿ ಪ್ರಾರಂಭಿಸಲಾಗುವುದು?

ಶ್ರೀ ಅರವಿಂದ ಲಿಂಬಾವಳಿ(ಉನ್ನತ ಶಿಕ್ಷಣ ಸಚಿವರು):

ಅ) ಜಮಖಂಡಿ ಮಹಿಳಾ ಕಾಲೇಜಿನಲ್ಲಿ 06 ಕೋರ್ಸ್‌ಗಳು ಇರತ್ತವೆ. (ಬಿ.ಎ/ಬಿ.ಎಸ್.ಸಿ/ಬಿಕಾಂ/ಬಿ.ಬಿ.ಎ/ ಬಿ.ಎಸ್.ಡಬ್ಲ್ಯೂ/). ಒಟ್ಟಾರೆ 714 ವಿದ್ಯಾರ್ಥಿನಿಯರು ವ್ಯಾಸಂಗ ಮಾಡುತ್ತಿರುತ್ತಾರೆ.

ಆ) ಕಾಲೇಜಿನ್ಲಲಿ 15 ಕೊಠಡಿಗಳ ಅಭಾವವಿರುತ್ತದೆ. ಶಿಕ್ಷಕರ ಅಭಾವವಿರುವುದಿಲ್ಲ.